## ಕಥೆ



**ಪ್ರತಿಭಾ ನಂದಕುಮಾರ್**

ಕಲೆ: ಎಸ್.ವಿ. ಹೂಗಾರ್



# ಸ್ವರ್ಗಲೋಕ ವೃತ್ತಾಂತ

ಸ್ಕೂಟರು ಓಡಿಸುತ್ತಿದ್ದ ರೇಣು ಕುದಿಯುತ್ತಿದ್ದಳು. ಎಲ್ಲಾ ರೆಡಿ ಮಾಡಿಟ್ಟು ಹೊರಟರೂ ಜಗಳ ಆಗಿತ್ತು. ಬಾತ್‌ರೂಮಿನಿಂದ ತಾನು ಹೊರಗೆ ಬರುವವರೆಗೆ ಕಾಯಲಾಗದೇ ಬಾಗಿಲು ಬಡಿದು ಬೈ ಹೇಳಿದ್ದಕ್ಕೆ ಕೋಪ ಬಂದು ಮಗ್ ಬಿಸಾಕಿ ಒಳಗಿನಿಂದಲೇ ಕಿರುಚಾಡಿದ್ದ ಗಿರೀಶ್.

'ಏನಂಥ ಅವಸರ? ಯಾವಳನ್ನ ಉದ್ಧಾರ ಮಾಡಕ್ಕೆ? ನಾನು ಹೊರಗೆ ಬರೋವರೆಗೂ ಕಾಯಕ್ಕಾಗಲ್ಲದಷ್ಟು ಇಂಪಾರ್ಟೆಂಟಾ?'

'ಓಕೇ... ಬನ್ನಿ ಕಾಯ್ತೀನಿ' ಅಂತ ಹೇಳಿ